ಶಿವಮೊಗ್ಗ ತಾಲ್ಲೂಕಿನ ಅಗಸವಳ್ಳಿ ಗ್ರಾಮದ ಸರ್ಕಾರಿ ಜಮೀನು ಹಂಚಿಕೆಯಾಗಿರುವ ಬಗ್ಗೆ

12(37): ಶ್ರೀ ಕುಮಾರಸ್ವಾಮಿ ಕೆ.ಜಿ. (ಶಿವಮೊಗ್ಗ ಗ್ರಾಮಾಂತರ): ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಶಿವಮೊಗ್ಗ ತಾಲ್ಲೂಕು ಅಗಸವಳ್ಳಿ ಸರ್ವೆ ನಂ. 167 ರಲ್ಲಿ ಲಭ್ಯವಿರುವ ಕಂದಾಯ ಇಲಾಖೆಗೆ ಸೇರಿದ ಸುಮಾರು 1600 ಎಕರೆ ಜಮೀನನ್ನು ಕಂದಾಯ ಅಧಿನಿಯಮದಡಿ ಸಾರ್ವಜನಿಕ ಉದ್ದೇಶಗಳಿಗೆ ಕಾಯ್ದಿರಿಸಲಾಗಿದೆಯೇ?

ಆ) ಈ ಸರ್ಕಾರಿ ಜಮೀನನ್ನು ಸಾರ್ವಜನಿಕ ಉದ್ದೇಶಗಳಿಗಾಗಿ ಶಿವಮೊಗ್ಗ ನಗರಾಭಿವೃದ್ಧಿ ಪ್ರಾಧಿಕಾರ ಕೆ.ಹೆಚ್.ಬಿ. ಆಯುರ್ವೇದ ವಿಶ್ವವಿದ್ಯಾಲಯ, ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡಗಳ ಇಲಾಖೆ ಹಾಗೂ ಇತರೆ ಇಲಾಖೆಗಳು ಕೋರಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ? (ಪೂರ್ಣ ವಿವರ ಒದಗಿಸುವುದು).

ಇ) ಬಂದಿದ್ದಲ್ಲಿ ಈ ಸರ್ಕಾರಿ ಸಂಸ್ಥೆಗಳಿಗೆ ಸದರಿ ಜಮೀನನ್ನು ಯಾವಾಗ ಹಸ್ತಾಂತರಿಸಲಾಗುವುದು?

ಶ್ರೀ ಜೆ.ಕರುಣಾಕರ ರೆಡ್ಡಿ (ಕಂದಾಯ ಸಚಿವರು):

ಅ) ಹೌದು

ಆ) ಹೌದು ಅಗಸವಳ್ಳಿ ಗ್ರಾಮದ ಸ.ನಂ. 167 ರಲ್ಲಿ ಈ ಕೆಳಕಂಡಂತೆ ಸಾರ್ವಜನಿಕ ಉದ್ದೇಶಕ್ಕೆ ಜಮೀನು ಕಾಯ್ದಿರಿಸಲು ಕೋರಿಕೆಗಳು ಬಂದಿರುತ್ತವೆ.

1. ಕರ್ನಾಟಕ ಗೃಹ ಮಂಡಳಿಗೆ 1000 ಎಕರೆ.
2. ಆಯುರ್ವೇದ ವಿಶ್ವವಿದ್ಯಾಲಯಕ್ಕೆ – 200 ಎಕರೆ.
3. ಬಳ್ಳಾರಿ ಜಿಲ್ಲೆಯ ಹಂಪಿ ಆಯುರ್ವೇದ ವಿಶ್ವವಿದ್ಯಾಲಯಕ್ಕೆ 200 ಎಕರೆ.
4. ಸಾರ್ವಜನಿಕ ವಸತಿ ನಿಲಯಕ್ಕೆ 10 ಎಕರೆ.
5. ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡಗಳ ವಿದ್ಯಾರ್ಥಿ ನಿಲಯಕ್ಕೆ 10 ಎಕರೆ.
6. ಒ.ಬಿ.ಸಿ. ವಿದ್ಯಾರ್ಥಿ ನಿಲಯಕ್ಕೆ 10 ಎಕರೆ.

ಇ) ಪ್ರಸ್ತಾವನೆಗಳು ವಿವಿಧ ಹಂತಗಳಲ್ಲಿ ಪರಿಶೀಲನೆಯಲ್ಲಿರುತ್ತವೆ.